ಇಲ್ಲಿ ಹೇಳುತ್ತ ಹೋಗುತ್ತಿರುವದು ಬರೀ ಅಚ್ಚಕ್ಕನ ಕಥೆಯೊಂದೇ ಅಲ್ಲ. ಅಚ್ಚಕ್ಕನ ಬದುಕಿನ ಬೇರಿಗೆ ಬಿಳಲಾಗಿ ಬಿದ್ದ ಸುಬ್ಬಿಯ ಕಥೆಯೂ ಇದೆ. ಅಚ್ಚಕ್ಕನ ಮುಷ್ಟಿಯಲ್ಲೊ ಇಲ್ಲಾ ಅವಳ ನೆರಳಲ್ಲೊ ತನ್ನದಲ್ಲದ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬೆಳೆಯುತ್ತಿರುವದಕ್ಕೊ ಏನೊ ಸುಬ್ಬಿ ಎಂದರೆ ಬೇವೂರಿನಲ್ಲಿ 'ಪಾಪದ ಹುಡುಗಿ'.

ಸುಭದ್ರೆಯ ಪಾಪದ ಬದುಕಿಗೆ ಮೂಲ ಕಾರಣ ಅಚ್ಚಕ್ಕನೊ? ಬಂಡೂಮಾಮನೊ? ಇಲ್ಲಾ ಅಣ್ಣಾರಾಯನೊ? ಅಂತೂ ಅವಳು ಇಂಚು ಇಂಚಾಗಿ ಬೆಳೆಯುತ್ತಿದ್ದಂತೆ ಅವಳ ಬದುಕಿನ ಸ್ವರಗಳು ಮುದುರುತ್ತ ನಡೆದದು ಮಾತ್ರ ಸತ್ಯ.

'ಅಪ್ಪ ಮನೆಬಿಟ್ಟು ದೇಶಾಂತರ ಹೋಗಿರದಿದ್ದರೆ?' ಎನ್ನುವ ಒಂದು ವಿಚಾರದ ತಂತು ಸುಬ್ಬಿಯನ್ನು ಕೊರೆಯುತ್ತಲೇ ಇದೆ. ಅಣ್ಣಾರಾಯ ಮನೆಬಿಟ್ಟು ಹೋದ ಘಳಿಗೆಯ ನೆನಪು ಇನ್ನೂ ಹನಿ ಹನಿಯಾಗಿ ಅವಳ ಅಂತರಂಗದಲ್ಲಿ ಬೇರುಬಿಟ್ಟದೆ.

ಆಷಾಢದ ಒಂದು ರಾತ್ರಿ ಇರಬಹುದು. ಸುಬ್ಬಿಗೆ ಚೆನ್ನಾಗಿ ನೆನಪಿದೆ. ಅದೇ ರಾತ್ರಿ ಅವ್ವ– ಅಪ್ಪನೊಡನೆ ಜಗಳಾಡಿದ ಘಟನೆ. 'ಗೋಪಣ್ಣಾ– ಏಳೋ ಅವ್ವ ಅಪ್ಪನ್ನ ಬೈಯಲಿಕ್ಹತ್ಯಾಳಾ.' ಎಂದು ಗೋಪಿಯ ಮುಸುಕು ಜಗ್ಗಿದಾಗ ಆತ ಸಿಡುಕಿ 'ಬಿಡ. ಅದು ದಿನದ್ದೆ. ಅವ್ವನ ಕೈಯಾಗ ಯಾರ ಉಳ್ದಾರ' ಎನ್ನುತ್ತ ಮುಸುಕು ಬೀರಿದ್ದ.

ಹೊರಗಿನ ಪಡಸಾಲೆಯಲ್ಲಿ ಕಂದೀಲಿನ ಬೆಳಕಿನಲ್ಲಿ ನಿಟ್ಟುಸಿರು ಬಿಡುತ್ತ ಕುಂತಿದ್ದ ಅಪ್ಪ.

'ನಾ ಸಾಪ, ಸಾಪ, ನಿಂಜೋಡಿ ಸಂಸಾರ ಮಾಡಾಕಲ್ಲ. ಇಂಥಾ ಕೈಲಾಗದ ಗಂಡನ ಜೋಡಿ ನಾ ಹ್ಯಾಂಗ ಜೀವನಾ ತೆಗೀಲಿ, ಭಿಕ್ಷ್ಯ ಬೇಡಿ, ಹೆಣ್ತಿ ಮಕ್ಕಳ ಹೊಟ್ಟಿ ತುಂಬಿಸೋ– ಹೆಣ್ಣ್ಯಾನ ಜೋಡಿ.'

'ಬ್ಯಾಡ– ಅಚ್ಚಿ, ಹಂಗನ್ಬ್ಯಾಡ. ಇದಕ ಭಿಕ್ಷಾ ಅಂತಿಯೇನು. ಇದು ಗುರಗೋಳ ಆಜ್ಞಾ ಆದ' ತಡೆ ತಡೆದು ಬರುವ ಅಣ್ಣಾರಾಯನ ಮಾತುಗಳು, ಸತ್ವ ಕಳೆದುಕೊಂಡಂತಿದ್ದವು.

'ಗುರುಗೋಳು, ಬೇಕಾದ್ದ ಹೇಳ್ತಾರ. ಇನ್ನೇನ ಮಾಡ್ತಾರ ಕೈಲಾಗದವರು ನೀವು, ಹೋಗಿ ಸಂಸಾರ ನಡಸೂ ಹಾದಿ ತೋರಸರಿ ಅಂತ ಕೇಳಿದ್ರಿ ಅವರ ಹೇಳಿದ್ರು, ತಮ್ಮ ವೃತ್ತಿನ ನಿಮಗ ಹೇಳಿದ್ರು, ಆದ್ರ ಊರಾಗ ನನಗ ತಲಿತಗ್ಗಿಸೊ ಹಂಗ ಆಗ್ಯದ. ಗೋಪಾಳ ಬೇಡೊ ಅಣ್ಣಾರಾಯನ ಹೆಣ್ತಿ ಅನಿಸಿಗೊಳ್ಳಿಕ್ಕೆ ನಾ ಜೀವನಾ ತಗಿಬೇಕಾಗ್ಯದ. ನನಗ ನಿಮ್ಮ ಜೋಡಿ ಸಂಸಾರ ಮಾಡೂ ಮನಸು ಇಲ್ಲ. ಸುಬ್ಬಿನ್ನ, ಗೋಪ್ಯಾನ್ನ ಕರಕೊಂಡು ಬಾವಿಬೀಳ್ತೇನಿ. ನೀವ ಬೇಡಿಕೊಂಡು ಜೀವನಾ ತಗೀರಿ. ಸುಟ್ಟಬರ್ಲಿ ಯಾರಿಗೆ ಬೇಕಾಗ್ಯದ ಈ ಮುರುಕು ಸಂಸಾರ' ಅಚ್ಚಕ್ಕ ಮುಸುಕು ಬೀರಿ ಮಲಗಿದಾಗಲೇ ಸುಬ್ಬಿ ಕಣ್ಮುಚ್ಚಿದ್ದು.

ಅಣ್ಣಾರಾಯ ಮಾತನಾಡಲಿಲ್ಲ. 'ಎಲ್ಲಾ ದೇವರಿಚ್ಛಾ' ಎಂದು ಮಲಗಿಕೊಂಡಿದ್ದರು. ಮರುದಿನ ಬೇವೂರಿನ ಗುಡ್ಡದಂಚಿಗೆ ಸೂರ್ಯ ಉದಯಿಸಿದಾಗ, ಅಚ್ಚಕ್ಕ ಎದ್ದು ಪಡಸಾಲೆಯ ಕಸಗುಡಿಸಲು ಹೊರಬಂದಾಗ ಅಣ್ಣಾರಾಯ ಮಲಗಿದ ಹಾಸಿಗೆ ಖಾಲಿಯಾಗಿತ್ತು. ದೇವರ ಕಟ್ಟೆಯ ಮೇಲೆ ಅವರ ಗೋಪಾಳ ಬೇಡುವ ತುಂಬಿಗೆ ಫಳ ಫಳಿಸುತ್ತಿತ್ತು. ಅಚ್ಚಕ್ಕ ಗಾಬರಿಯಾಗಿ ಮಗನನ್ನು ಕಡೆಕಳುಹಿಸಿದಳು.

ಆದರೆ ಮನೆಗೆಲಸ ಮುಗಿಸಿ ನಾಲ್ಕು ತಾಸು ಹೊತ್ತೇರಿದರೂ ಅಣ್ಣಾರಾಯನ ಸುಳಿವಿಲ್ಲ. ಬಿಸಿಲಿನ ಧಗೆ ಏರುತ್ತಿತ್ತು. ಸುಬ್ಬಿ ಗೋಪ್ಯಾ 'ಅವ್ವಾ ಹಸಿವಿ' ಎಂದು ರಾಗ ತೆಗೆದವು. ಆರು ತಾಸೇರಿದರೂ ಗಂಡನ ಸುಳಿವಿಲ್ಲ. ಅಂಗಡಿಯ ಸಿದ್ದಣ್ಣ ಬಂದು 'ಯವ್ವಾ ಅಪ್ಪಾರು ನಸಿಕಿನ್ಯಾಗ–